

ಮ್ಯಾಚ್ ಆಗುವ ಚಿನ್ನ, ಬೆಳ್ಳಿ ಅಥವಾ ಆಕ್ಸಿಡೈಸ್ಡ್ ಗೆಜ್ಜೆಯ ಹಾರ, ಕಿವಿಯೋಲೆ ಹಾಗೂ ಬಳೆಗಳನ್ನು ಧರಿಸಿದರೆ ನೋಡಲು ತುಂಬ ಚೆನ್ನಾಗಿರುತ್ತದೆ. ಪಾರ್ಟಿ, ಔಟಿಂಗ್, ಶಾಪಿಂಗ್ ಹಾಗೂ ಗೆಟ್ ಟುಗೆದರ್ ಮುಂತಾದೆಡೆ ಹೋಗುವಾಗ ಫ್ರಾಕ್, ಸಲ್ವಾರ್, ಗೌನ್, ಮಿಡಿಗಳಿಗೆ ಮ್ಯಾಚ್ ಆಗುವ ಗೆಜ್ಜೆಗಳಿಂದ ಕೂಡಿದ ಬ್ರೇಸ್ಲೆಟ್, ಚೋಕರ್ ಹಾಗೂ ಕಿವಿಯೋಲೆ ಧರಿಸಬಹುದು.

ಮದುಮಗಳ ಅಲಂಕಾರದಲ್ಲಿಯೂ ಗೆಜ್ಜೆಯ ಒಡವೆಗಳು ಪ್ರಮುಖ ಸ್ಥಾನ ಪಡೆದಿವೆ. ಬಂಗಾರದ ಎಳೆಯ ನಡುವೆ ಮಣಿಗಳ ಗೊಂಚಲುಗಳುಳ್ಳ ಗೆಜ್ಜೆಯ ಹಾರ ಮದುಮಗಳಿಗೆ ಆಕರ್ಷಕ ಲುಕ್ ನೀಡುತ್ತದೆ. ಅಲ್ಲದೆ ಹರಳುಗಳ ಮಧ್ಯೆ ಮಧ್ಯೆ ಗೆಜ್ಜೆಗಳನ್ನು ಅಳವಡಿಸಿದ ನೆಕ್ಲೇಸ್, ಗೆಜ್ಜೆಯ ಬೈತಲೆ ಬೊಟ್ಟು, ಗೆಜ್ಜೆಯ ಸೊಂಟದ ಪಟ್ಟಿ, ಹಾರಗಳ ತುದಿಯನ್ನು ಅಲಂಕರಿಸಿದ ಬಂಗಾರದ ಮಣಿಗಳು ಅಥವಾ ಗೆಜ್ಜೆಗಳು ಮದುಮಗಳಿಗೆ ಒಂದು ಹೊಸ ಲುಕ್ ನೀಡುವುದಂತೂ ಖಂಡಿತ.

## ಬೀಡ್ಸ್, ಟ್ಯಾಸೆಲ್ಸ್...

ಗೆಜ್ಜೆಯ ಆಭರಣಗಳಲ್ಲಿಯೂ ಬಗೆ ಬಗೆಯ ವಿನ್ಯಾಸಗಳು ಮಾರುಕಟ್ಟೆಗೆ ಬಂದಿವೆ. ಅವುಗಳಲ್ಲಿ ಮುಖ್ಯವಾಗಿ ಕಲರ್‌ಫುಲ್ ದಾರಗಳಲ್ಲಿ ತಯಾರಿಸಲಾದ ಟ್ಯಾಸೆಲ್‌ಗಳು, ವಿವಿಧ ವಿನ್ಯಾಸದ ಬೀಡ್ಸ್‌ಗಳು ಆಭರಣ ಪ್ರಪಂಚದಲ್ಲಿ ‘ಎವರ್‌ಗ್ರೀನ್’ ಆಗಿ ಮೆರೆಯುತ್ತಿವೆ. ಕಿವಿಯೋಲೆ, ಮೂಗುತಿ, ಹಾರ, ಡಾಬು, ವಂಕಿ, ಸೊಂಟ ಪಟ್ಟಿ, ಕಾಲುಂಗುರ, ಬಳೆ, ಎಲ್ಲ ವಿಧದ ಗೆಜ್ಜೆ ಆಭರಣಗಳು ಇದೀಗ ಟ್ರೆಂಡಿಯಾಗಿದ್ದು ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿವೆ.

ಬಹಳ ಹಿಂದಿನಿಂದಲೂ ಗೆಜ್ಜೆಗೊಂದು ರೊಮ್ಯಾಂಟಿಕ್ ಕಲ್ಪನೆ ಇದೆ. ಗೆಜ್ಜೆ ತೊಟ್ಟರೆ ಸಾಕು, ಅದರ ನಾದ ಕಿವಿಗಿಂಪು. ಗೆಜ್ಜೆಯ ಕಿಣಿ ಕಿಣಿ ನಾದ ಆಧುನಿಕ ಹೆಂಗಳೆಯರನ್ನೂ ಸೆಳೆದಿದೆ. ಇದಕ್ಕಾಗಿಯೇ ಹೊಸ ಹೊಸ ವಿನ್ಯಾಸದ ಗೆಜ್ಜೆಗಳು ಬಂದಿವೆ. ಕಾಲಿಗೆ ಮಾತ್ರವಲ್ಲ, ಗೆಜ್ಜೆಯ ಮೂಗುತಿ, ಬ್ರೇಸ್ಲೆಟ್, ಸರ, ಕಿವಿಯೋಲೆ, ಬೈತಲೆ ಬೊಟ್ಟು, ಸರ ಇತ್ಯಾದಿ ಬಂದಿದೆ.

ಭರತನಾಟ್ಯದಲ್ಲಿ ಗೆಜ್ಜೆಗೆ ಬಹಳ ಪ್ರಾಧಾನ್ಯ ಇದೆ. ಇಲ್ಲಿ ಹೆಣ್ಣು ಗಂಡೆಂಬ ಭೇದವಿಲ್ಲದೆ ಎಲ್ಲರೂ ಗೆಜ್ಜೆ ಕಟ್ಟಿಕೊಂಡು ತಾಳಕ್ಕೆ ತಕ್ಕಂತೆ ನೃತ್ಯ ಮಾಡಿದರೆ ಅದು ಕಿವಿಗೂ ಇಂಪು, ಮನಸ್ಸಿಗೂ ತಂಪು. ಹೆಜ್ಜೆಗೆ ತಕ್ಕಂತೆ ಗೆಜ್ಜೆಯೂ ತನ್ನ ಸಪ್ಪಳ ಮಾಡಿ ಗಮನಸೆಳೆಯುತ್ತದೆ. ಹೆಣ್ಣಿನ ಹನ್ನೆರಡು ಅಲಂಕಾರಗಳಲ್ಲಿ ಗೆಜ್ಜೆಯೂ ಒಂದು ಎನ್ನುತ್ತದೆ ಸಂಪ್ರದಾಯ. ಇದೊಂದು ಸೌಂದರ್ಯ ಹೆಚ್ಚಿಸುವ ಸಾಧನ. ಹೆಜ್ಜೆಯೊಂದಿಗೆ ಗೆಜ್ಜೆಯ ನಂಟು ಅನನ್ಯ.

ವುಡನ್ ಬೀಡ್ಸ್‌ನಿಂದ ಮಾಡಿದ ಗೆಜ್ಜೆ ಒಡವೆ ನೋಡಲು ಆಕರ್ಷಕ. ಬಣ್ಣ ಬಣ್ಣದ, ವಿವಿಧ ಆಕಾರದ ವುಡನ್ ಬೀಡ್ಸ್‌ನಿಂದ ತಯಾರಿಸಿದ ಗೆಜ್ಜೆಗಳು ಹಗುರವಾಗಿಯೂ ಇರುತ್ತವೆ. ಹಾಗೆಯೇ ಪ್ಲಾಸ್ಟಿಕ್ ಬೀಡ್ಸ್‌ನಿಂದ ಮಾಡಿದ ಕಾಲ್ಗೆಜ್ಜೆ ವಿಭಿನ್ನ ವಿನ್ಯಾಸ ಹಾಗೂ ಬಣ್ಣಗಳಲ್ಲಿ ಸಿಗುತ್ತದೆ. ಬೆಲೆಯೂ ಕಡಿಮೆ, ಹಗುರವಾಗಿಯೂ ಇರುತ್ತದೆ. ಬಣ್ಣಬಣ್ಣದ ಹರಳುಗಳಿಂದ, ಕುಂದನ್, ಮುತ್ತುಗಳಿಂದ ಮಾಡಿದ ಕಾಲ್ಗೆಜ್ಜೆ ಸಾಂಪ್ರದಾಯಿಕ ಉಡುಗೆಗಳಿಗೂ ಮ್ಯಾಚ್ ಆಗುವಂತಿವೆ. ವಿವಿಧ ಹಣ್ಣು, ತರಕಾರಿಗಳ ಬೀಜದಿಂದ ಮಾಡಿದ ನೈಸರ್ಗಿಕ ಕಾಲ್ಗೆಜ್ಜೆಗಳು ಈಗೀಗ ಫ್ಯಾಷನ್ ಎನಿಸಿಬಿಟ್ಟಿದೆ.

## ಆರೋಗ್ಯಕ್ಕೂ...

ಕಾಲ್ಗೆಜ್ಜೆ ಕಣ್ಣಿಗೆ ಹಿತ. ಇದನ್ನು ಧರಿಸುವ ಹೆಣ್ಣಿನ ಆರೋಗ್ಯಕ್ಕೂ ಇದು ಸಹಕಾರಿ. ಚಿನ್ನ ಬೆಳ್ಳಿಯ ಆಭರಣದ ಗೆಜ್ಜೆಗೆ ಆಯುರ್ವೇದದಲ್ಲಿ ಮಹತ್ವದ ಸ್ಥಾನ ಇದೆ. ಇದು ಪಾದದ ಮೂಳೆಯ ಕ್ಷಮತೆಯನ್ನು ಹೆಚ್ಚಿಸುತ್ತದೆ ಎನ್ನುತ್ತದೆ ಆಯುರ್ವೇದ.

ಕಾಲ್ಗೆಜ್ಜೆ ಆರೋಗ್ಯದ ದೃಷ್ಟಿಯಿಂದಲೂ ಒಳಿತು ಎಂದು ವೈಜ್ಞಾನಿಕವಾಗಿ ಹೇಳಲಾಗಿದೆ. ಕಾಲ್ಗೆಜ್ಜೆ, ಕೈಬಳೆಯನ್ನು ಧರಿಸುವುದು ಆರೋಗ್ಯಕರ. ಕಾಲ್ಗೆಜ್ಜೆಯ ಸಪ್ಪಳದಿಂದ ಮನೆಯಲ್ಲಿ ಸಕಾರಾತ್ಮಕ ಭಾವನೆ ಹಾಗೂ ಪರಿಶುದ್ಧತೆ ಆವರಿಸಿಕೊಳ್ಳುತ್ತದೆ ಎನ್ನುತ್ತದೆ ವೈಜ್ಞಾನಿಕ ಸಂಶೋಧನೆ.

ಕಾಲ್ಗೆಜ್ಜೆ ಶಬ್ದ ಕಾಲಿನ ಬಲವನ್ನು ಹೆಚ್ಚಿಸುತ್ತದೆ. ಬಂಗಾರ ಅಥವಾ ಬೆಳ್ಳಿ ಲೋಹ ಶರೀರಕ್ಕೆ ಒಳ್ಳೆಯದು. ಅನೇಕ ಕಾಯಿಲೆಗಳನ್ನು ತಡೆಯುವ ಶಕ್ತಿ ಈ ಲೋಹಕ್ಕಿದೆ. ಆಯುರ್ವೇದದಲ್ಲಿ ಕೆಲವೊಂದು ಔಷಧಗಳನ್ನು ಲೋಹದ ಬೂದಿಯಿಂದ ತಯಾರಿಸಲಾಗುತ್ತದೆ. ಹಾಗಾಗಿ ಲೋಹದ ಕಾಲ್ಗೆಜ್ಜೆ ಧರಿಸಲು ಉತ್ತಮ. ಬೆಳ್ಳಿಯ ಕಾಲ್ಗೆಜ್ಜೆಗಳನ್ನು ಧರಿಸುವುದರಿಂದ ಕಾಲು ನೋವು ಕಡಿಮೆಯಾಗುತ್ತದೆ, ಶರೀರ ದೌರ್ಬಲ್ಯಕ್ಕೂ ಕಾಲ್ಗೆಜ್ಜೆ ಮದ್ದು. ಬೆಳ್ಳಿಯ ಕಾಲ್ಗೆಜ್ಜೆ ಮಹಿಳೆಯರು ಧರಿಸುವುದರಿಂದ ದೇಹದ ರಕ್ತಸಂಚಾರ ಸಲೀಸಾಗುವಂತೆ ಮಾಡುತ್ತದೆ.

